(b) The Circular has been withdrawn and further action in this regard will be taken.

10-00 A.M.

Stoppage of about hundred B.T.S. Busses

ಶ್ರೀ ಪಿ. ರಾಮದೇವ್.—ತಮ್ಮಲ್ಲಿ ಕೈಮುಗಿದು ಕೇಳಿಕೊಳ್ಳುವುದೇನೆಂದರೆ, ಇವತ್ತಿನ ದಿವಸ ೧೦೨ ಬಿ.ಟಿ.ಎಸ್. ಬಸ್ಸುಗಳು ಓಡಾಡುತ್ತಿಲ್ಲ. ಇದರ ಬಗ್ಗೆ ವಿಚಾರ ಮಾಡಲು ಮತ್ತು ಒಂದು ನಿರ್ದಿಷ್ಟವಾದ ತೀರ್ಮಾನವನ್ನು ತೆಗೆದುಕೊಳ್ಳಲು ಸಹಿ ಮಾಡಿ ತಮಗೆ ಒಂದು ನೋಟೀಸನ್ನು ಕಳುಹಿಸಿದ್ದೇನೆ. ಅದಕ್ಕೆ ಮಾನ್ಯ ಟಿ. ಆರ್. ಶಾಮಣ್ಣನವರೂ ಕೂಡ ಸಹಿ ಮಾಡಿದ್ದಾರೆ. ಇಷ್ಟರವರೆಗೂ ಮಾನ್ಯ ಸಾರಿಗೆ ಮಂತ್ರಿಗಳು ಇಲ್ಲೇ ಇದ್ದರೂ, ನಿನ್ನೆ ದಿವಸ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಈ ವಿಷಯ ಬಂದಿದೆ. ಇವತ್ತು ಪ್ರಜಾವಾಣಿಯಲ್ಲಿ ಇದೇ ವಿಚಾರ ಬಂದಿದೆ. ೧೦೦ ಬಿ.ಟಿ.ಎಸ್. ಬಸ್ಸುಗಳು ಡಿಪೋದಲ್ಲಿ ನಿಂತು ಬಿಟ್ಟಿವೆ, ಅವು ರಸ್ತೆಯ ಮೇಲೆ ಓಡಾಡುತ್ತಿಲ್ಲ.

ಅಧ್ಯಕ್ಷರು.—ಅದನ್ನು ನನಗೆ ಕಳುಹಿಸಿಕೊಡಿ, with my remarks I will send it to the Minister concerned.

ಶ್ರೀಮತಿ ಎಸ್. ಪ್ರಮೀಳ.—ಇದು ಬೆಂಗಳೂರಿಗೆ ಸಂಬಂಧಪಟ್ಟಂತಹ ವಿಷಯವಾದ್ದರಿಂದ ಮಂತ್ರಿಗಳು ಎಲ್ಲಿದ್ದರೂ ಈ ಸಭೆಗೂ ಕರೆಸಬೇಕು.

ಶ್ರೀ ಟಿ. ಆರ್. ಶಾಮಣ್ಣ.—ಇದು ಬಹಳ ಪ್ರಮುಖವಾದ ವಿಚಾರ. ೨ ತಿಂಗಳ ಹಿಂದೆ ಇದೇ ವಿಚಾರವನ್ನು ಮಾನ್ಯ ಮಂತ್ರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಲು ಹೋಗಿದ್ದಾಗ ಅವರು ಉಪಚಾರ ಮಾಡಿ ನಮ್ಮನ್ನು ತೆಪ್ಪಗೆ ಮಾಡುವುದಕ್ಕೆ ಪ್ರಯತ್ನಪಟ್ಟರು. ನಮಗೆ ಬೋಜನ ಕೊಟ್ಟು ಎಲ್ಲವನ್ನೂ ಸರಿ ಮಾಡುತ್ತೇವೆಂದು ಹೇಳಿ ಕಳುಹಿಸಿಬಿಟ್ಟರು. ಇವೊತ್ತು ೧೦೦ ಬಸ್ಸುಗಳು ಓಡುತ್ತಿಲ್ಲ. ಜನ ಫುಟ್‌ಪಾತ್‌ನ ಮೇಲೆ ಓಡಾಡುತ್ತಿದ್ದಾರೆ. ಗಂಟೆಗಟ್ಟಲೆ ಸಾವಿರಾರು ಜನರು ಬಸ್ ನಿಲ್ದಾಣಗಳಲ್ಲಿ ನಿಂತಿರುತ್ತಾರೆ. ಸಾರಿಗೆ ವ್ಯವಸ್ಥೆ ಅವ್ಯವಸ್ಥೆಯಾಗಿದೆ. ಈ ವಿಚಾರವನ್ನು ಹಿಂದೆ ಅನೇಕ ಸಲ ಪ್ರಸ್ತಾಪ ಮಾಡಿದ್ದೇವೆ. ಇವತ್ತು ನಾವು ನೋಟೀಸ್ ಕೂಡ ಕೊಟ್ಟಿದ್ದೇವೆ. ಇವತ್ತು ಅಗತ್ಯವಾಗಿ ಮಂತ್ರಿಗಳು ಆಶ್ವಾಸನೆ ಕೊಡದಿದ್ದರೆ ಬಹಳ ಕಷ್ಟವಾಗುತ್ತದೆ. ಇದರ ಬಗ್ಗೆ ಒಂದು ಅಂತಿಮ ತೀರ್ಮಾನವಾಗಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಐ. ಪಿ. ಡಿ. ಸಾಲಪ್ಪ.—ಇದು ಬಹಳ ಮುಖ್ಯವಾದ ವಿಚಾರವಾದ್ದರಿಂದ ಅದಕ್ಕೆ ಅದ್ಯತೆಯನ್ನು ಕೊಡಬೇಕು. ಮತ್ತು ಒಂದು-ತೀರ್ಮಾನವನ್ನು ತೆಗೆದುಕೊಳ್ಳಬೇಕು.

ಶ್ರೀ ಟಿ ಆರ್. ಶಾಮಣ್ಣ.—ಇಂತಹ ಒಂದು ದೊಡ್ಡ ಜವಾಬ್ದಾರಿಯನ್ನು ಸರ್ಕಾರದವರು ನಿಭಿಸಿಕೊಂಡಮೇಲೆ ಅದನ್ನು ಸಮರ್ಪಕವಾದ ರೀತಿಯಲ್ಲಿ ಮಾಡಬೇಕು. ಇದನ್ನು ಬೆಂಗಳೂರು ಕಾರ್ಪೊರೇಷನ್‌ಗೆ ವಹಿಸುವ ಯೋಚನೆಯನ್ನು ಸರ್ಕಾರದವರು ಮಾಡುತ್ತಿದ್ದಾರೆಂದು ತಿಳಿದಿದ್ದೇನೆ. ಇದರಿಂದ ಏನಾಗುತ್ತದೆಂದು ತಾವು ಹೊರಲಾಗದ ಹೆಣವನ್ನು ಬೇರೆಯವರಿಗೆ ವಹಿಸಿದ ಹಾಗೆ ಹಾಗುತ್ತದೆ. ಇದು ಕಾರ್ಪೊರೇಷನ್‌ನವರಿಂದ ಸಾಧ್ಯವೇ ಆಗುವುದಿಲ್ಲ.

Sri B. Basavalingappa.—The question is not before the Government. We have not yet taken any decision in this regard. So, I don't think there is any basis for such presumptions. At proper time, we will inform the Hon'ble Members. Since the Minister concerned is busy in some meeting, we will make him to reply as soon as he comes to the House.

ಶ್ರೀಮತಿ ಎಸ್. ಪ್ರಮೀಳ.—ಮಂತ್ರಿಗಳನ್ನು ಕರೆಸಿ.

ಶ್ರೀ ಟಿ. ಆರ್. ಶಾಮಣ್ಣ.—ಇವತ್ತೇ ದಯಮಾಡಿ ಇದರ ಬಗ್ಗೆ ಉತ್ತರವನ್ನು ಕೊಡಿಸಿಕೊಡಿ ಏಕೆಂದರೆ ಇವತ್ತೇ ಅಸೆಂಬ್ಲಿ ಕೊನೆಯಾಗುತ್ತದೆ.

ಅಧ್ಯಕ್ಷರು.—ತಮಗೆ ವಿಷಯ ತಿಳಿಸುತ್ತೇನೆ.

ಶ್ರೀಮತಿ ಎಸ್. ಪ್ರಮೀಳ.—ಮಂತ್ರಿಗಳಿಗೆ ಬಹಳಷ್ಟು ಕಾರುಗಳಿವೆ ಅವುಗಳನ್ನು ಸಾರ್ವಜನಿಕರ ಉಪಯೋಗಕ್ಕಾಗಿ ಕೊಡಬೇಕು. ಬಿ.ಟಿ.ಎಸ್. ಬಸ್ಸುಗಳ ವಿಚಾರವಲ್ಲಿ ಸರ್ಕಾರದವರು ತೀರ್ಮಾನ ತೆಗೆದುಕೊಳ್ಳುವವರೆಗೆ ಸಾರ್ವಜನಿಕರು ಮಂತ್ರಿಗಳ ಕಾರುಗಳನ್ನು ಉಪಯೋಗಿಕೊಳ್ಳುತ್ತಾರೆ.

Stoppage of Mills in Davanagere

ಶ್ರೀ ಪಂಪಾಪತಿ.—ಎರಡು ತಿಂಗಳ ಒಂದೆ ಮಾನ್ಯ ಕೈಗಾರಿಕಾ ಮಂತ್ರಿಗಳು ದಾವಣಗೆರೆ ಹಾಗೂ ಹುಬ್ಬಳ್ಳಿಯಲ್ಲಿ ನಿಂತುಹೋಗಿರತಕ್ಕಂಥ ಮಿಲ್ಲುಗಳ ಬಗ್ಗೆ ಪ್ರಯತ್ನ ಮಾಡುತ್ತೇನೆಂದು ಹೇಳಿದ್ದರು. ಆದರೆ ಇಲ್ಲಿಯವರೆಗೂ ಆ ಮಿಲ್ಲುಗಳು ಪ್ರಾರಂಭವಾಗಿಲ್ಲ. ಮಾನ್ಯ ಕಾರ್ಮಿಕ ಮಂತ್ರಿಗಳು ಇಲ್ಲೇ ಇದ್ದಾರೆ ಅದರ ಬಗ್ಗೆ ಏನಾದರೂ ತಿಳಿಸುತ್ತಾರೆಯೇ ? ಪರಿಸ್ಥಿತಿ ಬಹಳ ಕಷ್ಟವಾಗಿದೆ. ಅಲ್ಲಿಯ ಕಾರ್ಮಿಕರಿಗೆ ವಿಷಯವನ್ನು ತಿಳಿಸಬೇಕಾಗಿದೆ.

ಅಧ್ಯಕ್ಷರು.—ಮಂತ್ರಿಗಳ ಜೊತೆಯಲ್ಲಿ ಮಾತನಾಡಿ.

ಶ್ರೀ ಪಂಪಾಪತಿ.—ನಮ್ಮ ಪರಿಸ್ಥಿತಿ ಏನಾಯಿತು ಎಂಬುದಾಗಿ ಅಲ್ಲಿಯ ಕಾರ್ಮಿಕರು ನಮ್ಮನ್ನು ಕೇಳುತ್ತಾರೆ. ನಾವು ಅವರಿಗೆ ಉತ್ತರ ಹೇಳಬೇಕು.

ಶ್ರೀಮತಿ ಅನುಸೂಯ ಗಜಾನನ ಶರ್ಮ.—ನಿನ್ನೆ ನಿಮ್ಮ ಗಮನಕ್ಕೆ ವಿಷಯವನ್ನು ತಂದಿದ್ದೆ. ಎರಡನ್ನು ಕಾಲಿಂಗ್ ಅಟೆನ್ಷ್ನ್ ರೂಪದಲ್ಲಿ ಹಾಗೂ ಒಂದನ್ನು ೫೧೨ರ ಕೆಳಗೆ ಹಾಕುತ್ತೇವೆಂದು ತಾವು ಹೇಳಿದ್ದೀರಿ. ಇವು ಬಹಳ ಮಹತ್ವವಾದ ವಿಷಯವಾಗಿದೆ, ಒಂದೇ ಕಾಲಿಂಗ್ ಅಟೆನ್ಷನ್ ಹಾಕಿದ್ದೀರಿ ಇದರಿಂದ ನನಗೆ ಅನ್ಯಾಯವಾಗಿದೆ.

ಅಧ್ಯಕ್ಷರು.—ಈಗ ಇರತಕ್ಕಂಥ ಕಾಲಿಂಗ್ ಅಟೆನ್ಷನ್ ಬಗ್ಗೆ ಮಾನ್ಯ ಮಂತ್ರಿಗಳನ್ನು ಕೇಳಿ ಅದಕ್ಕೆ ಅವರು ಉತ್ತರ ಕೊಡುತ್ತಾರೆ.

Calling Attention to a matter of urgent Public Importance

re : mis-spelling of "Nador" as "Nadavar" Community and hardship caused to the students of that Community in getting Caste Certificates.

SMT. ANUSUYA GAJANANA SHARMA (Ankola). – I call the attention of of the Minister for Law, Social Welfare and Backward Classes to the hardship caused to the students of Ankola in getting the caste certificate due to a minor spelling mistake in announcing the name of the caste 'Nador' as 'Nadavar'

SRI L. G. HAVANUR (Minister for Law and Social Welfare and Backward Classes).—Sir, I wish to make the following statement :—

In Government Order No. SWL 12 TBS 77 dated 22nd February 1977, the Government have recognised "NADAR" Caste as a Backward Caste and have in G. O. No. DPAB 1 SBC 77 dated 4th March 1977 stated NADOR, UPPUNADOR and TORKE NADOR as synomyms/ Local Names of this Caste,